**ದಿಃ 11.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು :** ಶ್ರೀ.ಇ.ಓ. ನ್ಯಾಯವಾದಿಗಳಿಂದಃ-

ದಾವ ಸ್ವತ್ತಿನಲ್ಲಿ ಗಂಗಾ ಕಲ್ಯಾಣ ಸರ್ಕಾರದ ಯೋಜನೆಯಲ್ಲಿ ಕೊಳವೆ ಬಾವಿ ಕೊರೆಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಕೊಳವೆ ಬಾವಿ ವಿದ್ಯುತ್ ಸಂಪರ್ಕಕ್ಕೆ ಟಿಸಿ ಯಿಂದ 5 ರಿಂದ 6 ಕಂಬಗಳ ಮೂಲಕ ಸಂಪರ್ಕ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ 6 ಕಂಬಗಳ ಮೂಲಕ ವಿದ್ಯುತ್ ಸಂಪರ್ಕ ಪಡೆದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಜಮೀನಿನಲ್ಲಿ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಯೊಂದಿಗೆ ಇನ್ನೊಂದು ಖಾಸಗಿಯಾಗಿ ಕೊಳವೆ ಬಾವಿ ಕೊರೆಸಿರುತ್ತೇವೆ. ಸದರಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿದ ಕೊಳವೆ ಬಾವಿ ದಾವ ಸ್ವತ್ತಿನಲ್ಲಿ ಪೂರ್ವ ಭಾಗದಲ್ಲಿರುತ್ತದೆ.ಸದರಿ ಕೊಳವೆ ಬಾವಿಗೆ ವಿದ್ಯುತ್ ಕಂಬಗಳೊಂದಿಗೆ ಸಂಪರ್ಕ ಪಡೆದಿರುತ್ತೇವೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ 1 ನೇ ಪ್ರತಿವಾದಿ ಪರ ನ್ಯಾಯಾವಾದಿಗಳು ದಾವ ಸ್ವತ್ತಿನ ಛಾಯಚಿತ್ರವನ್ನು ತೋರಿಸಿ ಸದರಿ ಚಿತ್ರದಲ್ಲಿ ಇರುವ ವಿದ್ಯುತ್ ಕಂಬದ ಪಕ್ಕದಲ್ಲಿರುವ ಬೋರ್ ವೆಲ್ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿದ್ದು ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಒಪ್ಪಿತ ಸಾಕ್ಷ್ಯವನ್ನು ಗುರುತಿಸುವುಕೆಗಾಗಿ ನಿ.ಡಿ.1 ಎಂದು ಗುರುತಿಸಲಾಯಿತು. ದಾವ ಸ್ವತ್ತಿನಲ್ಲಿ ಈ ಮೇಲೆ ಹೇಳಿದ 2 ಬೋರ್ ವೆಲ್ ಗಳು ಇರುವ ಬಗ್ಗೆ ನನ್ನ ದಾವೆ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಖಾಸಗಿ ಯಾಗಿ ಕೊರೆಸಿದ ಇನ್ನೊಂದು ಬೋರ್ ವೆಲ್ ದಾವ ಸ್ವತ್ತಿನಲ್ಲಿ ದಕ್ಷಿಣ ಭಾಗದಲ್ಲಿ ಇರುತ್ತದೆ. ಸದರಿ ದಕ್ಷಿಣ ಭಾಗದಲ್ಲಿ ಇರುವ ಖಾಸಗಿಯಾಗಿ ಕೊರೆಸಿರುತ್ತೇವೆ ಎಂದು ಹೇಳುವ ಬೋರ್ ವೆಲ್ ಪ್ರತಿವಾದಿಯರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಸದರಿ ಬೋರ್ ವೆಲ್ ನಿಂದ ಯಾವತ್ತು ನೀರಾವರಿ ಮಾಡಿ ಕೃಷಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನ ದಕ್ಷಿಣದಲ್ಲಿನ ಬೋರ್ ವೆಲ್ ಹತ್ತಿರ 1 ನೀರಿನ ತೊಟ್ಟಿಯನ್ನು ನಿರ್ಮಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೇನೆ ಎಂದರೆ ಸರಿಯಲ್ಲ. ಸದರಿ ತೊಟ್ಟಿಯು ಪ್ರತಿವಾದಿಯರು ನಿರ್ಮಿಸಿಕೊಂಡಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತೊಟ್ಟಿಗೆ ಈ ಮೇಲೆ ಹೇಳಿದ ದಕ್ಷಿಣ ಭಾಗದಲ್ಲಿನ ಬೋರ್ ವೆಲ್ ಸೇರಿದಂತೆ ಪ್ರತಿವಾದಿಗೆ ಸೇರಿದ ಇತರೆ 3-4 ಬೋರ್ ವೆಲ್ ಗಳ

ನೀರು ಸಹ ಸದರಿ ತೊಟ್ಟಿಗೆ ಬರುತ್ತದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ದಾವ ಸ್ವತ್ತಿನ ಪೂರ್ವದಲ್ಲಿನ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿನ ಬೋರ್ ವೆಲ್ ನ್ನು ಮುಚ್ಚಿ ಹಾಕಲಾಗಿರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ನೀರು ಬತ್ತಿ ಹೋದ ಕಾರಣ ಮುಚ್ಚಿ ಹಾಕಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ಮೇಲೆ ಹೇಳಿದ ದಾವ ಸ್ವತ್ತಿನ ದಕ್ಷಿಣ ಭಾಗದ ಬೋರ್ ವೆಲ್ ನ್ನು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿನ ಬೋರ್ ವೆಲ್ ಎಂದು ಪಾಲುನುಭವಿಯಾಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿನ ಕೊರೆಸಿದ್ದ ಬೋರ್ ವೆಲ್ ನ್ನು ಮುಚ್ಚಿ ಹಾಕಿದ್ದರೂ ಸಹ ಅದನ್ನು ಆಳವಾಗಿ ಕೊರೆಸಿ ನೀರು ಬರುತ್ತಿರುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವ ಸ್ವತ್ತಿನ ದಕ್ಷಿಣ ಭಾಗದಲ್ಲಿನ ಪ್ರತಿವಾದಿಯರಿಗೆ ಸೇರಿದ ಬೋರ್ವೆಲ್ ನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಸದರಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಅಳತೆ ಮಾಡಿಸಲು ನನ್ನ ತಂದೆ ಅರ್ಜಿ ಕೊಟ್ಟಿರುತ್ತಾರೆ. ಈ ಸಂಬಂದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸದರಿ ದಾಖಲೆಯು ನಮ್ಮ ತಂದೆಯ ಮರಣ ನಂತರ ಅದು ಎಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ದಕ್ಷಿಣ ಭಾಗದಲ್ಲಿರುವ ತೊಟ್ಟಿಯ ಅಳತೆಯು ಸುಮಾರು 1 ಗುಂಟೆ ಇರುತ್ತದೆ. ಆದರೆ ಅದರ ನಿಖರವಾದ ಅಳತೆ ನನಗೆ ಗೊತ್ತಿಲ್ಲ. ದಕ್ಷಿಣ ಭಾಗದಲ್ಲಿರುವ ಬೋರ್ ವೆಲ್ ಗೆ ಸದರಿ ತೊಟ್ಟಿಯು 10 ಅಡಿ ಅಂತರವಿರುತ್ತದೆ.

ನಮಗೆ ಸೇರಿದ ಜಮೀನು ಮತ್ತು ಪ್ರತಿವಾದಿಯರ ಜಮೀನಿನ ಮದ್ಯೆ ಬದುವಿನ ಮೇಲೆ 1 ಜಾಲಿ ಮರವಿರುತ್ತದೆ ಎಂದರೆ ಸಾಕ್ಷಿಯು ಸದರಿ ಜಾಲಿ ಮರ ನಮಗೆ ಸೇರಿದ್ದಾಗಿದ್ದು, ಪ್ರತಿವಾದಿಯರು ನನ್ನ ತಂದೆಯ ಮರಣದ ನಂತರ ಸದರಿ ಜಾಲಿ ಮರ ಸೇರಿದಂತೆ ಬದುವನ್ನು ಹಾಕಿಕೊಂಡಿರುತ್ತಾರೆ ಎಂದು ಮುಂದುವರೆದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಬದುವನ್ನು ಒತ್ತುವರಿ ಮಾಡಿ ಹಾಕಿಕೊಂಡ ಬಗ್ಗೆ ಸಂಬಂದಪಟ್ಟ ಪೋಲಿಸ್ ಠಾಣೆ ಗೆ ದೂರು ನೀಡಿದ್ದು, ಸದರಿ ದಾವೆಯಲ್ಲಿಯು ಸಹ ಹೇಳಿರುತ್ತೇವೆ. ಪ್ರತಿವಾದಿಯರು ದಾವ ಸ್ವತ್ತನ್ನು ಈ ಮೇಲೆ ಹೇಳಿದ ಜಾಲಿ ಮರವಿರುವ ಬದುವಿನಿಂದ ಉತ್ತರ ದಿಕ್ಕಿನ ಜಮೀನನ್ನು ನಮಗೆ ಕ್ರಯಕ್ಕೆ ಕೊಟ್ಟಿದ್ದಾಗಿರುತ್ತದೆ ಎಂದರೆ ಸಾಕ್ಷಿಯು 1975 ರಲ್ಲಿ ನಮ್ಮ ಅಜ್ಜನಿಗೆ ಆದ ಕ್ರಯಪತ್ರದ ಚಕ್ಕು ಬಂದಿಯಂತೆ ಪ್ರತಿವಾದಿಯರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ 1 ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಬದು ಮತ್ತು ಜಾಲಿ ಮರವಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ಒಪ್ಪಿದ್ದು, ಸದರಿ ಪೋಟೋವನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಬದು ಮತ್ತು ಜಾಲಿ ಸೇರಿದಂತೆ ಸುಮಾರು 27 ಗುಂಟೆ ಜಮೀನು ದಕ್ಷಿಣ ಭಾಗದಲ್ಲಿ ನಮಗೆ ಸೇರಿದ್ದಾಗಿರುತ್ತದೆ ಎಂದು ಮುಂದುವರೆದು ನುಡಿಯುತ್ತಾರೆ. ಸದರಿ 27 ಗುಂಟೆ ತಮಗೆ ಸೇರಿದ್ದಾಗಿರುತ್ತದೆ ಎಂದು ಹೇಳುವ ಬಗ್ಗೆ ದಾಖಲೆ ಇದೆಯಾ ಎಂದರೆ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ನಾನು ದಾವೆ ಸಲ್ಲಿಸಿರುವ ದಾವ ಸ್ವತ್ತಿಗೆ ಸಂಬಂದಿಸಿದಂತೆ 2 ಸರ್ವೆ ನಂಬರ್ ಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ 2 ಸರ್ವೆ ನಂಬರ್ ಗಳ ಜಮೀನು  ಒಂದಕ್ಕೊಂದು ಲಗತ್ತಾಗಿದ್ದು ಒಂದೇ ಚಕ್ಕು ಬಂದಿ ಇರುತ್ತದೆ. ಸದರಿ ಸರ್ವೆ ನಂಃ9/1 - 1 ಎಕರೆ 3 ಗುಂಟೆ ರಡ್ಡಿ ಹಳ್ಳಿ ಗ್ರಾಮದ ಜಮೀನು  ದಾವ ಸ್ವತ್ತಿನ ಉತ್ತರ ಭಾಗದಲ್ಲಿರುತ್ತದೆ. ಸದರಿ ಜಮೀನು ಪೂರ್ವ ಭಾಗಕ್ಕೆ ಬರುತ್ತದೆ ಎಂದರೆ ಸರಿಯಲ್ಲ.  ದಾವ ಸೆಡ್ಯೂಲ್ ಆಸ್ತಿಯನ್ನು ನಾನು ಯಾವತ್ತು ಖುದ್ದು ನೋಡಿರುವುದಿಲ್ಲ ಆದ್ದರಿಂದ ನನಗೆ ದಾವ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.  ದಾವ ಸ್ವತ್ತಿನ ಪೂರ್ವಕ್ಕೆ ಖರಾಬು ಜಮೀನು ಇದ್ದು ಬೀಳು ಬಿದ್ದಿರುತ್ತದೆ ಎಂದರೆ ಸರಿ. ದಾವ ಸ್ವತ್ತನ್ನು ಮಾರಾಟ ಮಾಡುವ ಕಾಲಕ್ಕೆ ಅಂದಾಜು ಅಳತೆಯಲ್ಲಿ ಕ್ರಯ ಮಾಡಿದ್ದು,  ಸಂಬಂದಪಟ್ಟ ಸರ್ವೆ ಇಲಾಖೆಯಿಂದ ಅಧಿಕೃತವಾಗಿ ಅಳತೆ ಮಾಡಿಸಿ ಕ್ರಯಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.  ಈಗಾಗಿ ದಾವ ಸ್ವತ್ತು ನಿಖರವಾಗಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.  ಉದ್ದಗಟ್ಟ ಗ್ರಾಮಕ್ಕೆ ಸೇರಿದ ಸರ್ವೆ ನಂಃ59/ ಪಿ ನಲ್ಲಿ  ಪ್ರತಿವಾದಿಯರ ತಂದೆಯು ಕ್ರಯಕ್ಕೆ ಕೊಡುವ ಕಾಲಕ್ಕೆ 2 ಎಕರೆ 10 ಗುಂಟೆ ವಿಸ್ತೀರ್ಣ ದ ಜಮೀನನ್ನು ಮಾತ್ರ ಸ್ವಾಧೀನಾನುಭವಕ್ಕೆ ನಮ್ಮ ಅಜ್ಜನಿಗೆ ಕೊಟ್ಟಿದ್ದಾಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯರು ದಾವ ಸ್ವತ್ತು ಸೇರಿದಂತೆ ಅಳತೆಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಳತೆ ಕಾಲದಲ್ಲಿ ದಾವ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.  ಅಲ್ಲಿಯವರೆಗೂ ದಾವ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.  ಪ್ರತಿವಾದಿಯರಿಗೆ ಸೇರಿದ ದಾವ ಸ್ವತ್ತಿನ ದಕ್ಷಿಣ ಭಾಗದಲ್ಲಿನ ಪ್ರತಿವಾದಿಯರಿಗೆ ಸೇರಿದ 27 ಗುಂಟೆ ವಿಸ್ತೀರ್ಣದ ಜಮೀನನ್ನು ಅಕ್ರಮವಾಗಿ

ಪಡೆಯುವ ಸಲುವಾಗಿ ಸದರಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವ ಸ್ವತ್ತನ್ನು ಯಾವತ್ತು ಒತ್ತು ವರಿ ಮಾಡಿರುವುದಿಲ್ಲ, ಮತ್ತು ಅವರಿಗೆ ಸೇರಿದ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ 27 ಗುಂಟೆ ವಿಸ್ತೀರ್ಣದ ಜಮೀನನಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು

ಓ ಎಸ್. ನಂಃ 83/2017

ಪಿಡಬ್ಲೂ - 1